ಪ್ರಸ್ತಾವ ಅಂಗೀಕಾರ

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು) : ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

"2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವ ರೀತಿಯಲ್ಲಿ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅಧ್ಯಕ್ಷರು : ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಸರ್ಕಾರದ ಉತ್ತರ.

(ಅ) ಆರ್ಟಿಕಲ್ 371ರ ಮೇಲೆ ಚರ್ಚೆಗೆ ಅವಕಾಶ ನೀಡುವ ಬಗ್ಗೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಾವು ನಿನ್ನೆ ನನಗೆ ಆಶ್ವಾಸನೆ ಕೊಟ್ಟಿದ್ದಿರಿ. ಆರ್ಟಿಕಲ್ 371 ರ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ತಾವು ನನಗೆ ಹೇಳಿದ್ದಿರಿ. ಆದಕಾರಣ ಆರ್ಟಿಕಲ್ 371 ರ ಮೇಲೆ ಚರ್ಚೆ ಮಾಡಲು ದಯಮಾಡಿ ನನಗೆ ಒಂದರ್ಧ ಗಂಟೆ ಅವಕಾಶ ಮಾಡಿಕೊಡಬೇಕು.

(ಆ) ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆಗೆ ಅವಕಾಶ ಕೋರಿ ಚರ್ಚೆ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ 11.15 ರವರೆಗೂ ಕುಳಿತಿದ್ದೇವೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಗಿದಿದ್ದು ನಾಳೆ ದಿವಸ ಸರ್ಕಾರ ರಿಪ್ಲೈ ಕೊಡುತ್ತದೆ ಎಂದು ಸದನದಲ್ಲಿ ತಾವೇ ಅನೌನ್ಸ್ ಮಾಡಿದ್ದೀರಿ. ಆಮೇಲೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಲಿಲ್ಲ ಎನ್ನುವ ಒಂದು ವಿಚಾರ ಇದೆ. ನಾನು ಉತ್ತರ ಕೊಟ್ಟ ಮೇಲೆ ಕ್ಲಾರಿಫಿಕೇಷನ್‌ನಲ್ಲಿ ಬೇಕಾದರೆ ಅವರು ಕೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ನಾನಗೆ ಮಾತನಾಡಲು ಅವಕಾಶ ಕೊಡಬಾರದೆ ?

ಶ್ರೀ ಎನ್. ಧರ್ಮಸಿಂಗ್ : ಅದು ಅಧ್ಯಕ್ಷರಿಗೆ ಬಿಟ್ಟ ವಿಚಾರ. ನೀವು ಎಲ್ಲಿಯವರೆಗೆ ಚರ್ಚೆ ಮಾಡುತ್ತೀರಿ ಅದನ್ನು ನಾವು ಕೇಳುತ್ತೇನೆ. ನಾವೇನೂ ಅಭ್ಯಂತರ ಮಾಡುವುದಿಲ್ಲ. ಆದರೆ ಈಗ ಎಲ್ಲಾ ಚರ್ಚೆ ಮುಗಿದುಹೋಗಿದೆ.

(ಗೊಂದಲ)

ಅಧ್ಯಕ್ಷರು : ಈ ವಿಚಾರದಲ್ಲಿ ನನದೇನೂ ಪ್ರಸ್ಟೀಜ್ ಯಾವುದೂ ಇಲ್ಲ. ನಿನ್ನೆಯ ದಿನ ರಾತ್ರಿ 11.30 ರವರೆಗೂ ಸದನದಲ್ಲಿ ಚರ್ಚೆ ನಡೆದಿದೆ. ನಾವು ನಿನ್ನೆಯೇ ರಾಜ್ಯಪಾಲರ ಭಾಷಣದ ಮೇಲೆ ಇವೊತ್ತು ಚರ್ಚೆ ಮತ್ತು ನಾಳೆ ಉತ್ತರ ಎಂದು ಹೇಳಿ ಚರ್ಚೆಯನ್ನು ನಿನ್ನೆಯೇ ಎಷ್ಟು ಹೊತ್ತಾದರೂ ಮುಗಿಸಬೇಕು ಎಂದು ಸಭಾನಾಯಕರು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು

ಹೇಳಿದ್ದಾರೆ. ರಾತ್ರಿ 11.30 ವರೆಗೆ ತಾವೆಲ್ಲರೂ ಕುಳಿತಿದ್ದಿರಿ. ಅದಕ್ಕಾಗಿ ತಮಗೆ ವಂದನೆಗಳನ್ನು ಹೇಳುತ್ತೇನೆ. ಈವತ್ತು ಮಧ್ಯಾಹ್ನ 2 ಗಂಟೆಯವರೆಗೂ ಚರ್ಚೆ ನಡೆಯಬೇಕು ಎಂದು ಸಭೆ ತೀರ್ಮಾನ ಮಾಡಿದರೆ ಅದಕ್ಕೆ ನನ್ನದೇನು ಅಡ್ಡಿಯಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅವರು ಹಿರಿಯ ಸದಸ್ಯರು ಇದ್ದಾರೆ. ನಿನ್ನೆ ನಾನು ಮಾತನಾಡಿದಾಗ ಸ್ವಲ್ಪ ಬೇಸರಕ್ಕೆ ಅವಕಾಶವಾಯಿತು. ಮಾತನಾಡಲಿ ಬಿಡಿ ಸಾರ್.

ಅಧ್ಯಕ್ಷರು : ಅದನ್ನು ಸಭೆ ಒಪ್ಪಬೇಕು. ನಾನು ಪತ್ತೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಮುಂದುವರಿಸುವುದಕ್ಕೆ ನಾನಾಗಿಯೇ ಒಪ್ಪಿಕೊಳ್ಳುವುದಿಲ್ಲ. ಸಭೆ ಇನ್ನೂ ಒಂದು ಗಂಟೆ ಮಾಡಿ, ಎರಡು ಗಂಟೆ ಮಾಡಿ, ಮೂರು ಗಂಟೆ ಮಾಡಿ ಎಂದು ಒಪ್ಪಿದರೆ ನಾನು ಅದರ ಪ್ರಕಾರ ನಡೆದುಕೊಳ್ಳುತ್ತೇನೆ. ಸಭೆಯ ತೀರ್ಮಾನದಂತೆ ನಾನು ನಡೆಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕು. ಅದರ ಜೊತೆಗೆ ನಮ್ಮ ಕಡೆ ಮಾನ್ಯ ಈಶ್ವರಪ್ಪನವರು, ಅರಗ ಜ್ಞಾನೇಂದ್ರ, ನಾನು ಹಾಗೂ ಇನ್ನೂ ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ. ಎಲ್ಲರಿಗೂ ಐದೈದು ನಿಮಿಷ ಅವಕಾಶ ಕೊಟ್ಟುಬಿಡಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಈ ಸದನದಲ್ಲಿ ನಾನೇನೂ ಮಾತನಾಡಲಿಲ್ಲ. ನಾವು ಹಿರಿಯ ಸದಸ್ಯರುಗಳಾಗಿದ್ದೇವೆ. ನಮಗೆ ಅವಕಾಶಕೊಟ್ಟರೆ ಕೆಲವು ಸಂಗತಿಗಳನ್ನು ಹೇಳುವಂಥದ್ದು ಇವೆ. ಅದರೆ ಮಾತನಾಡಲು ನಮಗೆ ಅವಕಾಶವೇ ಇಲ್ಲವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರಿಗೆ ಅವರ ಮನೆಯವರ ಮೇಲೆ ಮುನಿಸಿಕೊಳ್ಳಲು ಅವರಿಗೆ ಸಂಪೂರ್ಣ ಹಕ್ಕಿದೆ. ಆದರೆ ಸದನದ ಮೇಲೆ ಮುನಿಸಿಕೊಂಡು ಅವರು ಹೋದ ಮೇಲೆ ನಾವೇನು ಮಾಡಬೇಕು ಹೇಳಿ ? ನಿನ್ನೆಯ ದಿವಸ ಸಂಪೂರ್ಣವಾಗಿ ಅವರು ಇಲ್ಲಿಯೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಅವರು ನಿನ್ನೆಯ ದಿವಸ ಮುನಿಸಿಕೊಂಡು ಹೋಗಿದ್ದಕ್ಕೆ ಇಂದು ಈ ರೀತಿಯಾಗಿ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ನೀವು ಹೇಳುವುದು ನೋಡಿದರೆ ನಾನು ಮತ್ತು ಅಧ್ಯಕ್ಷರು ಕದನಕ್ಕೆ ಇಳಿಯಬೇಕಾಗುತ್ತದೆ. ಅದು ಸರಿಯಲ್ಲ. ನನಗೆ ಅವರ ಬಗ್ಗೆ ಬಹಳ ಗೌರವವಿದೆ. ಸದನಕ್ಕೆ ಮುನಿಸಿಕೊಂಡು ಹೋಗುವ ಪ್ರಶ್ನೆಯೇ ಬರುವುದಿಲ್ಲ. ನಾವು ಏಕೆ ಮುನಿಸಿಕೊಂಡು ಹೋಗೋಣ? ಸದನಕ್ಕೆ ಏಕೆ ಮುನಿಸಿಕೊಂಡು ಹೋಗೋಣ ? ಕಾರಣ ಏನಿದೆ, ಸದನ ಎಲ್ಲರ ಸ್ವತ್ತು. ಇದಕ್ಕೆ ಮುನಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಮಾನ್ಯ ಅಧ್ಯಕ್ಷರೆ, ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದು ತಮಗೆ ಸೇರಿದ್ದು.

ಅಧ್ಯಕ್ಷರು : ಈ ಸದನ ಒಪ್ಪಿಗೆ ನೀಡಿದರೆ ನನ್ನದೇನೂ ಅಡ್ಡಿ ಇಲ್ಲ. ಇಲ್ಲದಿದ್ದರೆ, ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಕ್ತಾಯವಾಗಿದೆಯೆಂದು ತಿಳಿದುಕೊಳ್ಳಬೇಕಾಗುತ್ತದೆ. ತದನಂತರ, ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಿದ ವಂದನಾ ನಿರ್ಣಯದ

ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಿದ ಬಳಿಕ ಇವೊತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ತಿಳಿಸಿರುವಂತೆ ಸದನ ನಡೆಸಬೇಕಾಗಿದೆ. ಆದುದರಿಂದ, ಉತ್ತರಿಸುವಂತೆ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಆಹ್ವಾನಿಸಬೇಕಾಗುತ್ತದೆ. ಅದಕ್ಕೂ ಮುನ್ನ ಈ ಸಭೆಯ ಸದಸ್ಯರೆಲ್ಲರೂ ಇನ್ನೂ ಅರ್ಧ ಗಂಟೆ, ಒಂದು ಗಂಟೆ, ಎರಡು ಗಂಟೆಗಳ ಕಾಲ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಚರ್ಚೆ ಮುಂದುವರೆಸುತ್ತೇವೆಂದು ತೀರ್ಮಾನಿಸುವುದಾದರೆ ನನ್ನದೇನೂ ಅಡ್ಡಿಯಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಪುನಃ ಅವಕಾಶ ಕಲ್ಪಿಸಿಕೊಡುವುದು ಅಷ್ಟು ಸರಿಯಾಗಿ ಕಾಣುವುದಿಲ್ಲ. ಈ ಕುರಿತಾದ ಚರ್ಚೆ ಮುಕ್ತಾಯವಾಗಿದೆಯೆಂದು ನಿನ್ನೆಯೇ ತಾವು ಹೇಳಿದ್ದೀರಿ. ಈಗ ಮಾನ್ಯ ಸಭಾ ನಾಯಕರು ಉತ್ತರ ನೀಡಲಿ.

ಅಧ್ಯಕ್ಷರು : ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರವೆಂದು ಕಾರ್ಯಕಲಾಪಗಳ ಪಟ್ಟಿಯಲ್ಲಿ ಅದನ್ನೇ ಪುನರಾವರ್ತಿಸಿ ಹೇಳಿದ್ದೇನೆ. ಈಗ ಏನು ಮಾಡೋಣ ?

ಶ್ರೀ ಎಸ್.ಎಸ್. ಪಾಟೀಲ್ : ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಹಾಗೇ ಮಾತನಾಡುತ್ತಿದ್ದರೆ, ಇನ್ನೂ ಎರಡು ದಿವಸಗಳ ಕಾಲ ಅಧಿವೇಶನ ನಡೆಸಬೇಕಾಗುತ್ತದೆ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ 11.00 ಗಂಟೆವರೆಗೆ ಕಾದರೂ ಮಾತನಾಡಲು ನನಗೆ ಅವಕಾಶ ಸಿಗಲಿಲ್ಲ.

ಅಧ್ಯಕ್ಷರು : ಅವಕಾಶ ಸಿಗಲಿಲ್ಲವೆಂದರೆ ಏನು ಮಾಡುವುದಕ್ಕಾಗುತ್ತದೆ ? ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಇನ್ನು ಎರಡು, ಮೂರು ಗಂಟೆಗಳ ಕಾಲ ನಡೆಸಬೇಕೆಂದು ಇಡೀ ಸಭೆ ಒಪ್ಪಿದರೆ ನನ್ನದೇನೂ ಅಡ್ಡಿಯಿಲ್ಲ. ಇಲ್ಲದಿದ್ದರೆ, ನಾನು ಕಾರ್ಯಕಲಾಪಗಳ ಪಟ್ಟಿಯಲ್ಲಿ ತಿಳಿಸಿರುವ ರೀತ್ಯ ನಡೆದುಕೊಳ್ಳುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಈಗ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ.....

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೆ, ನಾನು ಈ ಮನೆಯ ಒಬ್ಬ ಹಿರಿಯ ಸದಸ್ಯನಾಗಿ, ಸಂಖ್ಯೆಯಲ್ಲಿ ನಾನು ಒಬ್ಬನೇ ಇರಬಹುದು. 1967 ರಿಂದ ಈ ಸದನಕ್ಕೆ ಬಂದು, ಸದನದ ಗೌರವ, ಗಾಂಭೀರ್ಯವನ್ನು ಎತ್ತಿಹಿಡಿದಿದ್ದೇನೆ. ಈ ಸದನದಲ್ಲಿ ಒಂದು ದಿನವೂ ನಾನು ಗೈರುಹಾಜರಾಗಿಲ್ಲ. ಉದ್ದೇಶಪೂರ್ವಕವಾಗಿ ಈ ಸದನದಲ್ಲಿ ನನ್ನ ಮಾತನ್ನು ತಡೆಹಿಡಿಯ ಬೇಕೆನ್ನುವಂಥ ವಿಚಾರ ಅನೇಕರಲ್ಲಿ ಇರಬಹುದು. ಆದರೆ, ಈ ರಾಜ್ಯದ ಜನತೆಗೆ ಸಂಬಂಧಪಟ್ಟಿರುವ ವಿಚಾರಗಳ ಬಗ್ಗೆ ಇಲ್ಲಿ ಮುಕ್ತವಾಗಿ ಚರ್ಚಿಸತಕ್ಕ ಅವಕಾಶವನ್ನು ತಾವು ನನಗೆ ವಂಚಿಸಿರುವುದರಿಂದ ನಾನು ತಮ್ಮ ಪೀಠದ ಹತ್ತರ ಬಂದು ಹತ್ತು ನಿಮಿಷಗಳ ಕಾಲ ಧರಣಿ ಮಾಡಿ ನಂತರ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾಧ್ಯಕ್ಷರ ಪೀಠದತ್ತ ಧಾವಿಸಿ ಅಲ್ಲಿಯೇ ಧರಣಿ ಹೂಡಿದರು. ಆದೇ ರೀತಿ ಹಿರಿಯ ಸದಸ್ಯರಾದ ಶ್ರೀ ವೈಜನಾಥ ಪಾಟೀಲ್‌ರವರೂ ಸಹ ಸದನದ ಬಾವಿಗಿಳಿದು ಧರಣಿ ಹೂಡಲು ಪ್ರಾರಂಭಿಸಿದರು)

ಡಾ॥ ವೀರ ಬಸವಂತರೆಡ್ಡಿ ಮುದ್ನಾಳ್ (ಯಾದ್‌ಗಿರಿ) : ಅಧ್ಯಕ್ಷರೆ, ನಿನ್ನೆ ನಾವೆಲ್ಲರೂ ಮಾತನಾಡಿದ್ದೇವೆ. ಅದೇ ರೀತಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರೂ ಕೂಡ ಮಾತನಾಡಬಹುದಾಗಿತ್ತು. ಆದರೆ, ಸದನದಲ್ಲಿ ಸದಸ್ಯರು ಅಷ್ಟಾಗಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿದ್ದರಿಂದ ಅವರು ಮಾತನಾಡಲಿಲ್ಲ ! ಮಾನತಾಡಬೇಕೆಂಬ ಉದ್ದೇಶದಿಂದ ನಾವು ನಿನ್ನೆ ಮುಂಜಾನೆಯಿಂದ ರಾತ್ರಿಯವರೆಗೆ ಕಾದು ಕುಳಿತಿದ್ದೆವು. ನಿನ್ನೆ ಸದನ ಖಾಲಿ ಇದ್ದರೂ ನಾವು ಮಾತನಾಡಬೇಕಾಯಿತು. ಆದರೆ, ಸದನ ಖಾಲಿ ಇದ್ದರೆ ನೀವು (ವಾಟಾಳ್ ನಾಗರಾಜ್) ಮಾತನಾಡುವಂತಿಲ್ಲ ! ಮಾತನಾಡಲು ನಿಮಗೆ ಸದನ ತುಂಬಿರಬೇಕೆಂದರೆ, ಅದು ತಪ್ಪಾಗುತ್ತದೆ. ನಿನ್ನೆ ತಾವು ಅವರಿಗೆ (ವಾಟಾಳ್ ನಾಗರಾಜ್‌ರವರಿಗೆ) ಅವಕಾಶ ಕೊಟ್ಟಿದ್ದರೂ, ಅವರು ಭಾಷಣ ಮಾಡಲಿಲ್ಲ.

(ಸದಸ್ಯರಾದ ಶ್ರೀ ವೈಜನಾಥ್ ಪಾಟೀಲರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ವೈಜನಾಥ ಪಾಟೀಲರೆ, ತಾವು ತಮ್ಮ ಆಸನಕ್ಕೆ ತೆರಳಿ ಕುಳತುಕೊಳ್ಳಿ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಿದ ಬಳಿಕ ತಾವು ಸ್ಪಷ್ಟೀಕರಣವಾದರೂ ಕೇಬಹುದು. ನಿಯಮಗಳ ರೀತ್ಯ ನಾವು ಸದನದ ಕಲಾಪವನ್ನು ನಡೆಸಬೇಕಾಗುತ್ತದೆ. ನಿನ್ನೆ ಕಲಾಪ ರಾತ್ರಿ 11.30 ಗಂಟೆವರೆಗೂ ಜರುಗಿದೆ. ಆದುದರಿಂದ, ಉತ್ತರ ನೀಡಲು ಅವಕಾಶ ಸಿಗಲಿಲ್ಲವಾದ್ದರಿಂದ ಈಗ ಉತ್ತರಿಸಬೇಕಾಗಿದೆ. ಆದಕಾರಣ, ತಾವು ತಮ್ಮ ಆಸನದತ್ತ ತೆರಳಬೇಕು.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) : ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಬೆಂಚ್‌ನಲ್ಲಿರುವ ಸದಸ್ಯರುಗಳನ್ನೂ ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಇವೊತ್ತಿನ '*Times of India*' ಪತ್ರಿಕೆಯಲ್ಲಿ ಒಂದು ಲೇಖನ ಪ್ರಕಟವಾಗಿದ್ದು, ಅದರಲ್ಲಿ "ರಾಜಕಾರಣಿಗಳು ವಿಧಾನಸಭೆಗೆ ಬಂಕ್ ಮಾಡುತ್ತಿದ್ದಾರೆ" ಎಂದು ತಿಳಿಸಿದ್ದಾರೆ. ಏಕೆ ಹೀಗಾಗುತ್ತಿದೆಯೆಂದರೆ, ಸನ್ಮಾನ್ಯರಾದ ತಾವು ಹಿಂದಿನ ಬೆಂಚ್‌ನಲ್ಲಿರುವ ಸದಸ್ಯರುಗಳ ಬಗ್ಗೆ ಸ್ವಲ್ಪ ಲಕ್ಷ್ಯ ವಹಿಸಿದರೆ, ಯಾವುದೇ ಸದಸ್ಯರು ಈ ಸದನದಲ್ಲಿ ಕುಳಿತುಕೊಳ್ಳ ಬೇಕೆಂದರೆ, ಅವರಿಗೂ ಮಾತನಾಡಲು ಅವಕಾಶ ಕೊಟ್ಟರೆ, ಖಂಡಿತವಾಗಿಯೂ ಮಾತನಾಡುತ್ತಾರೆ. ಅದು ಬಿಟ್ಟು ಮುಂದಿನ ಬೆಂಚ್‌ನಲ್ಲಿ ಕುಳಿತಿರುವ ಸದಸ್ಯರುಗಳಿಗಷ್ಟೇ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟರೆ, ಕೊನೆಯ ಬೆಂಚ್‌ನಲ್ಲಿ ಕುಳಿತಿರುವ ಸದಸ್ಯರುಗಳಿಗೆ ಯಾವುದೇ ಆಸಕ್ತಿ ಉಳಿಯುವುದಿಲ್ಲ. ಕೊನೆಗೆ, ಮನೆಗೆ ಹೋಗಿ ಟಿ.ವಿ. ಯಾಲ್ಲಾದರೂ ನೋಡಬಹುದೆಂದು ಹಿಂದಿನ ಬೆಂಚ್‌ನಲ್ಲಿರುವವರೆಲ್ಲರೂ ಸದನದಿಂದ ಹೊರ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ಹಿಂದಿನ ಬೆಂಚ್‌ನಲ್ಲಿರುವ ಸದಸ್ಯರುಗಳನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಈ ಮೂಲಕ ತಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ಸಂವಿಧಾನದ 371ನೇ ಅನುಚ್ಛೇದಕ್ಕೆ ತಿದ್ದುಪಡಿ ತರುವ ಕುರಿತಂತೆ ತಂದಿರುವ ಪ್ರಸ್ತಾವದ ಕುರಿತು ಮಾತನಾಡಲು ದಯವಿಟ್ಟು ಅವಕಾಶ ಕಲ್ಪಿಸಿಕೊಡಬೇಕು.

(ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾಧ್ಯಕ್ಷರ ಪೀಠದ ಬಳಿ ನಿಂತು ಮಾತನಾಡುತ್ತಿದ್ದರು)

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಅಧ್ಯಕ್ಷರೆ, ದಯವಿಟ್ಟು ಅವರನ್ನು ಸದನದಿಂದ ಹೊರಗೆ ಕಳುಹಿಸಿದರೆ ಒಳ್ಳೆಯದಾಗುತ್ತದೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ವೈಜನಾಥ ಪಾಟೀಲರೆ, ಮಾನ್ಯ ಮುಖ್ಯಮಂತ್ರಿಗಳು ಸೂಕ್ತ ಉತ್ತರ ನೀಡುತ್ತಾರೆ. ನಿಮ್ಮ ಭಾವನೆಗಳನ್ನು ಸ್ಪಷ್ಟೀಕರಣ ಮೂಲಕ ಕೇಳಿ.

ಒಬ್ಬ ಮಾನ್ಯ ಸದಸ್ಯರು : ಇನ್ನೊಂದು ಗಂಟೆ ಕಾಲ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕು.

(ಮಾನ್ಯ ಸದಸ್ಯರಾದ ವೈಜನಾಥ ಪಾಟೀಲರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ನೀವು ಅರ್ಥ ಮಾಡಿಕೊಳ್ಳಬೇಕು. ಸದನದ ಹಿರಿಯ ಸದಸ್ಯರಾದ ತಾವೇ ಹೀಗೆ ವರ್ತಿಸಿದರೆ ಹೇಗೆ ?

ಶ್ರೀ ಪ್ರಕಾಶ್ ಖಂಡ್ರೆ : ಅಧ್ಯಕ್ಷರೆ, ಸಂವಿಧಾನದ 371ನೇ ಅನುಚ್ಛೇದಕ್ಕೆ ತಿದ್ದುಪಡಿ ತರುವ ಕುರಿತಂತೆ ತಂದಿರುವ ಪ್ರಸ್ತಾವದ ಕುರಿತು ಚರ್ಚಿಸಲು ಅವಕಾಶ ಕಲ್ಪಿಸಿಕೊಡುವುದಾಗಿ ಈಗ ಸದನದಲ್ಲಿ ತಾವು ಒಪ್ಪಿಕೊಂಡಿರಿ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರೆಸಲು ಮಾನ್ಯ ಮುಖ್ಯಮಂತ್ರಿಯವರು ತಯಾರಾಗಿದ್ದಾರೆ. ಆದರೆ, ಅದಕ್ಕೆ ತಾವು ಅವಕಾಶ ಕಲ್ಪಿಸಿಕೊಡುವುದಿಲ್ಲವೆಂದರೆ ಹೇಗೆ ?

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ ಕಳೆದ 45 ದಿವಸಗಳಿಂದ ನನ್ನ ತಾಲ್ಲೂಕಿನಲ್ಲಿ ರೈತರು ಹಗಲು– ರಾತ್ರಿ ಧರಣಿ, ಸತ್ಯಾಗ್ರಹ ಮಾಡುತ್ತಿದ್ದಾರೆ. ಆದಕಾರಣ, ದಯಮಾಡಿ ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವೈಜನಾಥ ಪಾಟೀಲರೆ, ದಯಮಾಡಿ ತಾವು ಕುಳಿತುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರಿಸುತ್ತಾರೆ. ನಾವೂ–ನೀವೂ ಕಳೆದ ಹತ್ತು ವರ್ಷಗಳಿಂದ ಇದೇ ರೀತಿ ಮಾಡಿಕೊಂಡು ಬಂದಿದ್ದೇವೆ. ತಾವು ಬನ್ನಿ, ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಿದ ನಂತರ ನೀವು ಕೇಳಿ. ಅವರು ನೀಡಿದ ಉತ್ತರ ತಮಗೆ ಸಮಾಧಾನಕರವಾಗಿ ಇರಲಿಲ್ಲವೆಂದರೆ ತಾವು ಎದ್ದು ನಿಂತು ಎಷ್ಟು ಬೇಕೋ ಅಷ್ಟು ಸ್ಪಷ್ಟೀಕರಣ ಕೇಳಿ. ಮಾನ್ಯ ಅಧ್ಯಕ್ಷರು ಈಗ ಒಂದು ನಿರ್ಣಯ ಕೈಗೊಂಡಿದ್ದಾರೆ.

ಅಧ್ಯಕ್ಷರು : ಮಾನ್ಯ ವೈಜನಾಥ ಪಾಟೀಲರೆ, ತಾವು ದಯಮಾಡಿ ಕೇಳಬೇಕು. ಈಗ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಉತ್ತರಿಸಲು ಕರೆದಿದ್ದೇನೆ. ಅವರು ಈಗ ಉತ್ತರಿಸುತ್ತಾರೆ. ಅವರು ಉತ್ತರ ಕೊಟ್ಟು ಮುಗಿಸಿದ ಬಳಿಕ ಎರಡು ನಿಮಿಷಗಳ ಕಾಲ ನಿಮಗೆ ಮಾತನಾಡಲು ಅವಕಾಶ ಕಲ್ಪಿಸಿಕೊಡುತ್ತೇನೆ. ಅದಾದ ನಂತರ, ಸಂವಿಧಾನದ 371ನೇ ಅನುಚ್ಛೇದಕ್ಕೆ ತಿದ್ದುಪಡಿ ತರುವ ಕುರಿತಂತೆ ತಂದಿರುವ ಪ್ರಸ್ತಾವದ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಿಕೊಡುತ್ತೇನೆ. ಅದಕ್ಕೆ ಮುಖ್ಯಮಂತ್ರಿಗಳು ಉತ್ತರಿಸುತ್ತಾರೆ. ನಾನು ಸದನವನ್ನು ಮುಂದೂಡುವುದಿಲ್ಲ. ಅವಕಾಶ ಕಲ್ಪಿಸಿಕೊಡುತ್ತೇನೆಂದು ಹೇಳುತ್ತಿದ್ದೇನಲ್ಲ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ವೈಜನಾಥ ಪಾಟೀಲರೆ, ಮಾನ್ಯ ಅಧ್ಯಕ್ಷರು ನಿಮಗೆ ಭರವಸೆ ಕೊಡುತ್ತಿದ್ದಾರೆ. ಈ ಸಲ ಹಾಗಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ಕೊಟ್ಟ ತಕ್ಷಣ ಸಂವಿಧಾನದ 371ನೇ ಅನುಚ್ಛೇದಕ್ಕೆ ತಿದ್ದುಪಡಿ ತರುವ ಕುರಿತಂತೆ ತಂದಿರುವ ಪ್ರಸ್ತಾವದ ಕುರಿತು ಚರ್ಚಿಸಲು ನಿಮಗೆ ಹತ್ತು ನಿಮಿಷಗಳ ಕಾಲ ಅವಕಾಶ ಕಲ್ಪಿಸಿಕೊಡುತ್ತಾರೆ. ನಂತರ, ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರಿಸುತ್ತಾರೆ.

ಅಧ್ಯಕ್ಷರು : ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಿದ ನಂತರ ತಮಗೆ ವಿಷಯ ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರಿಸುತ್ತಾರೆ. ಆದಕಾರಣ, ಈಗ ಉತ್ತರ ಕೊಡುವಂತೆ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕರೆದಿದ್ದೇನೆ. ತಾವು ದಯಮಾಡಿ ತಮ್ಮ ಆಸನಕ್ಕೆ ತೆರಳಿ ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ, ಅಧಿವೇಶನವನ್ನು 100 ದಿವಸಗಳ ಕಾಲ ಕರೆದರೆ ಈ ರೀತಿಯ ಸಮಸ್ಯೆಯೇ ಉದ್ಭವಿಸುವುದಿಲ್ಲ. ಬದಲಾಗಿ, 8–10 ದಿವಸಗಳ ಕಾಲ ಅಧಿವೇಶನ ಕರೆಯುವುದು ಯಾರೂ ಮಾತನಾಡಲು ಸಾಧ್ಯವಾಗದಿರುವುದು ಮತ್ತು ರಾಜ್ಯದ ಸಮಸ್ಯೆಗಳಿಗೆ ಸ್ಪಂದಿಸದಿರುವ ಪರಿಸ್ಥಿತಿಯುಂಟಾಗುತ್ತದೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಿದ ವಂದನಾ ನಿರ್ಣಯ ಪ್ರಸ್ತಾವದ ಮೇಲೆ ವಿರೋಧ ಪಕ್ಷದ ನಾಯಕರೂ ಒಳಗೊಂಡಂತೆ ಇನ್ನಿತರ ಪಕ್ಷಗಳ ನಾಯಕರೂ, ಆ ಕಡೆ ಮತ್ತು ಈ ಕಡೆ ಇರುವ .....

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾಧ್ಯಕ್ಷರ ಪೀಠದ ಹತ್ತಿರ ನಿಂತು ಮಾತನಾಡುತ್ತಿದ್ದರು)

ಶ್ರೀ ಧರ್ಮಸಿಂಗ್ : ವಾಟಾಳ್ ನಾಗರಾಜ್‌ರವರೆ, ನಿಮ್ಮ ಬಗ್ಗೆ ಗೌರವವಿದೆ. ವೈಜನಾಥ್ ಪಾಟೀಲರ ಬಗ್ಗೆ ಗೌರವ ಇದೆ. ನಿನ್ನೆ ನೀವು ಸದನದಲ್ಲಿದ್ದಾಗ, ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯ ಪ್ರಸ್ತಾವದ ಮೇಲಿನ ಚರ್ಚೆ ಮುಕ್ತಾಯವಾಗಿದೆ. ನಾಳೆ ಉತ್ತರ ಇದೆಯೆಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಅದರಂತೆ, ಈ ಕುರಿತಾದ ಉತ್ತರವನ್ನು ಈ ಮನೆಯಲ್ಲೂ ನೀಡಬೇಕು ಮತ್ತು ಆ ಮನೆಯಲ್ಲೂ ನೀಡಬೇಕು. ಅದಕ್ಕೋಸ್ಕರ, ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಇವ್ವೊತ್ತು ಒಬ್ಬರಿಗೆ ಅವಕಾಶ ಕಲ್ಪಿಸಿಕೊಟ್ಟರೆ ಎಲ್ಲರೂ ಕೂಡ ತಮಗೂ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳುತ್ತಾರೆ. ನಿನ್ನೆಯೂ ಕೂಡ ನಾನು ಮಾತನಾಡುತ್ತಾ, 'ಒಬ್ಬರಿಗೆ ಮಾತನಾಡಲು ಅವಕಾಶ ಕಲ್ಪಿಸಿದರೆ ಎಲ್ಲರೂ ಕೂಡ ಎದ್ದುಬಿಡುತ್ತಾರೆ' ಎಂದು ಹೇಳಿದೆ. ನಾನು ಈ ಕುರಿತಾದ ಉತ್ತರ ನೀಡಿದ ಬಳಿಕವೂ ತಾವು ಕೇಳುವ ಸ್ಪಷ್ಟೀಕರಣಗಳಿಗೂ ಉತ್ತರಿಸುತ್ತೇನೆ. ಅದು ಮಾನ್ಯ ಅಧ್ಯಕ್ಷರಿಗೆ ಬಿಟ್ಟ ವಿಚಾರ, ನನಗೇನೂ ಸಂಬಂಧವಿಲ್ಲ. ಅದಕ್ಕೆ ನಾವೇನು ಮಾಡೋಣ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಇವರಿಬ್ಬರೂ (ವೈಜನಾಥ ಪಾಟೀಲ್ ಮತ್ತು ವಾಟಾಳ್ ನಾಗರಾಜ್) ಕೂಡ ಹಿರಿಯ ಸದಸ್ಯರಾಗಿದ್ದು, ಕಿರಿಯ ಸದಸ್ಯರಿಗೆ ಮಾದರಿಯಾಗಿ

ನಡೆದುಕೊಳ್ಳಬೇಕಾಗಿರುವುದು ಅವರ ಧರ್ಮವಾಗಿದೆ. ಅದು ಬಿಟ್ಟು ಹಿರಿಯ ಸದಸ್ಯರೇ ಈ ರೀತಿ ವರ್ತಿಸಿದಾಗ ಹೊಸದಾಗಿ ವಿಧಾನಸಭೆಗೆ ಆರಿಸಿ ಬಂದಿರುವ ಕಿರಿಯ ಸದಸ್ಯರಿಗೆ ಏನು ಸಂದೇಶ ತಲುಪುತ್ತದೆ ? ಆದುದರಿಂದ, ಹಿರಿಯ ಸದಸ್ಯರಾಗಿರುವ ತಾವು ದೊಡ್ಡ ಮನಸ್ಸು ಮಾಡಿ ತಂತಮ್ಮ ಆಸನಗಳಿಗೆ ವಾಪಸ್ಸು ಬಂದು ಕುಳಿತುಕೊಳ್ಳಬೇಕು. ಎಲ್ಲವೂ ಸರಿಹೋಗುತ್ತದೆ.

ಅಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರೆ ತಾವು ಹಿರಿಯ ಸದಸ್ಯರು. ನಿನ್ನೆ ಏನಾಯಿತು ಎಂಬುದು ತಮಗೆ ಗೊತ್ತು ನಿನ್ನೆ ಮಾನ್ಯ ಯಡಿಯೂರಪ್ಪನವರು ಕೆಲವು ವಿಚಾರಗಳಲ್ಲಿ ಪ್ರಸ್ತಾಪ ಮಾಡಿದರು. ಆಗ ಹೊಸದಾಗಿ 79 ಜನ ಸದಸ್ಯರಿಗೆ ಕೊಡಬೇಕೆಂದು ಅವರು ಹೇಳಿದರು. ಆಗ ನಾನು ಬೋಪಯ್ಯನವರನ್ನು ಕರೆದೆ. ನಾನು ಬೋಪಯ್ಯನವರನ್ನು ಕರೆದಾಗ ತಾವು ಹೊರಗಡೆ ಹೊರಟಿರಿ, ನೀವು ಹೋಗುತ್ತಿರುವಾಗ ಅವರು ಹೊಸ ಸದಸ್ಯರು ಮಾತನಾಡುತ್ತಿದ್ದಾರೆ ಅವರದ್ದು ಅದಮೇಲೆ ನಿಮಗೆ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ ಎಂದು ನಾನು ಹೇಳಿದೆ. ನನ್ನದೇನೊ ಮೀಟಿಂಗ್ ಇತ್ತು. ನಾನು ಎದ್ದು ಹೋಗುವವರೆಗೆ ತಾವು ಬರಲಿಲ್ಲ. ನಿನ್ನೆ ಇದನ್ನು ಕನ್‌ಕ್ಲೂಡ್ ಮಾಡಿದ್ದಾರೆ. ಇದನ್ನು ಪುನಃ ರೀಓಪನ್ ಮಾಡಬೇಕಿದ್ದರೆ ಈ ಹೌಸ್ ರೀಓಪನ್ ಮಾಡಬೇಕೇ ಹೊರತು ನಾನು ಅದರ ಬಗ್ಗೆ ಏನೂ ಮಾಡುವುದಿಲ್ಲ. ಹೌಸ್ ಇದನ್ನು ರೀಓಪನ್ ಮಾಡಲಿ, ಎರಡು ಗಂಟೆಯವರೆಗೆ ಚರ್ಚೆ ಮಾಡಲಿ ಎಂದು ಹೇಳಲಿ ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿ ಇದ್ದು ಮಾತನಾಡುತ್ತಿದ್ದರು)

ಅಧ್ಯಕ್ಷರು : ಅಗೌರವರಲ್ಲ, ತಾವು ಹಿರಿಯ ಸದಸ್ಯರು, ತಮ್ಮ ಬಗ್ಗೆ ನನಗೆ ಅಪಾರವಾದ ಗೌರವವಿದೆ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿ ಇದ್ದು ಮಾತನಾಡುತ್ತಿದ್ದರು)

ಅಧ್ಯಕ್ಷರು : ತಮ್ಮ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಆದರೆ ಈ ವ್ಯವಸ್ಥೆಯಲ್ಲಿ ಏನು ಮಾಡುವುದಕ್ಕಾಗುತ್ತದೆ ? ಎಲ್ಲರೂ ಮಾತನಾಡಬೇಕು, ನನಗೆ ಅವಕಾಶ ಕೊಟ್ಟಿಲ್ಲ. ನನಗೆ ಅವಕಾಶ ಕೊಟ್ಟಿಲ್ಲವೆಂದರೆ ಹೇಗೆ ?

ಡಾ॥ ವೀರ ಬಸವಂತರೆಡ್ಡಿ ಮುದ್ನಾಳ್ : ಮಾನ್ಯ ಅಧ್ಯಕ್ಷರೆ, I rise objection if you give chance to anybody today. ತಾವು ಮತ್ತೆ ಯಾರಿಗಾದರೂ ಮಾನತಾಡಲು ಅವಕಾಶ ಕೊಟ್ಟರೆ ನನ್ನ objection ಇದೆ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಿಂದ ಮಾತನಾಡುತ್ತಿದ್ದರು)

ಡಾ॥ ವೀರ ಬಸವಂತರೆಡ್ಡಿ ಮುದ್ನಾಳ್ : ನಮ್ಮ objection ತಿಳಿಸಲು ತಾವು ಅವಕಾಶ ಮಾಡಿಕೊಡಬೇಕು. I object very seriously. Nobody else can speak now except the Chief Minister.

ಅಧ್ಯಕ್ಷರು : ನಮಗೆ ಬೇರೆ ಯಾವುದೇ ಉದ್ದೇಶವಿಲ್ಲ, ನಿಯಮಾವಳಿಯ ಪ್ರಕಾರ ನಡೆಸಿದ್ದೇವೆ, ನಿನ್ನೆ ಇವತ್ತೇ ಕೊನೆ ಯಾರು ಬೇಕಾದರೂ ಚರ್ಚೆಯಲ್ಲಿ ಭಾಗವಹಿಸಬಹುದು ಎಂದು ನಾವು ಹೇಳಿದ್ದೇವೆ. ನಿನ್ನೆ ರಾತ್ರಿ 11.30ರವರೆಗೆ ಈ ಸಭೆ ನಡೆದಿದೆ. ನಿಮಗೆ ನಿರಾಕರಿಸಬೇಕು ಎಂಬ ಉದ್ದೇಶ ಯಾರಿಗೂ ಇಲ್ಲ. ನನಗೂ ಇಲ್ಲ. ಇದನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

(ವಾಟಾಳ್‌ನಾಗರಾಜ್‌ರವರು ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು : ಕಪ್ಪು ಎಲ್ಲಿ ಬಂತು ! ಚುಕ್ಕೆ ಎಲ್ಲಿ ಬಂತು ! ಯಾರೂ ನಿರಾಕರಣೆ ಮಾಡಲಿಲ್ಲ. ಅನೇಕ ಜನರು ಐದು ಆರು ನಿಮಿಷ ಮಾತನಾಡಿದ್ದಾರೆ. ಅನೇಕ ಜನರು ಭಾಗವಹಿಸಿದ್ದಾರೆ. ಯಾರಿಗೂ ನಿರಾಕರಿಸಬೇಕು ಎಂಬುದು ನಮ್ಮ ಉದ್ದೇಶವಲ್ಲ, ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು, ತಮ್ಮ ಹಿರಿತನದ ಬಗ್ಗೆ ನಮಗೆ ಗೌರವವಿದೆ. ಈ ಸಭೆ ಇದನ್ನು ರೀಓಪನ್ ಮಾಡಿ ಇಷ್ಟು ಗಂಟೆಯವರೆಗೆ ಚರ್ಚೆಗೆ ತೆಗೆದುಕೊಳ್ಳೋಣವೆಂದರೆ ನನ್ನ ಅಭ್ಯಂತರವೇನಿಲ್ಲ.

(ಗೊಂದಲ)

(ವಾಟಾಳ್‌ನಾಗರಾಜ್‌ರವರು ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ, ತಾವು ಮಾತನಾಡಿ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಿನ್ನೆ ಮಾತನಾಡಲು ಸಮಯ ಕೊಟ್ಟರೂ ಮಾತನಾಡಲಿಲ್ಲ, ಈಗ ಮಾತನಾಡುತ್ತೇನೆಂದು ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರ ಸಿಟ್ಟು ನಮ್ಮ ಮೇಲೆ ಇರಬಹುದು, ಆದರೆ ತಮ್ಮ ಮೇಲೆ ತೋರಿಸುವಂತಿಲ್ಲ. ನಿಮ್ಮ ನಡವಳಿಕೆಯ ಬಗ್ಗೆ ನಿಮ್ಮ ಬಗ್ಗೆ ಹೇಳುತ್ತಾರೆಂದರೆ ಸರಿಯಲ್ಲ.

ಅಧ್ಯಕ್ಷರು : ನಮ್ಮ ನಡವಳಿಕೆಯ ಬಗ್ಗೆ ಎಲ್ಲರಿಗೂ ಗೊತ್ತಾಗಿದೆ. ಇಲ್ಲಿ ಏನಾಯಿತು ಎಂಬ ಬಗ್ಗೆ ಎಲ್ಲರಿಗೂ ಗೊತ್ತಾಗಿದೆ.

(ಗೊಂದಲ)

(ಮಾನ್ಯ ವಾಟಾಳ್‌ನಾಗರಾಜ್‌ರವರು ವೆಲ್‌ನಿಂದ ಮಾತನಾಡುತ್ತಿದ್ದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಮಾತನಾಡಿದಮೇಲೆ ನಾವು ಮಾತನಾಡಿದ್ದು, ಬೇಕಾದರೆ ತೆಗೆದು ನೋಡಿ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ವಾಟಾಳ್ ನಾಗರಾಜ್‌ರವರು ವೆಲ್‌ನಲ್ಲಿ ಇದ್ದು ಏನು ಮಾತನಾಡಿದ್ದಾರೆ ಅದು ಕಡತಕ್ಕೆ ಹೋಗಬಾರದು.

ಅಧ್ಯಕ್ಷರು : ವೆಲ್‌ನಲ್ಲಿ ನಿಂತುಕೊಂಡು ಯಾರ್ಯಾರು ಏನೇನು ಮಾತನಾಡುತ್ತಾರೆ, ಅದು ವಾಟಾಳ್‌ನಾಗರಾಜ್‌ರವರಾಗಲಿ ಅಥವಾ ವೈಜನಾಥ್ ಪಾಟೀಲರಾಗಲಿ ಇನ್ನೊಬ್ಬರಾಗಲಿ ಅದು ಯಾವುದು ಕಡತಕ್ಕೆ ಹೋಗಬಾರದು. ಅದನ್ನು ಕಡತದಿಂದ ತೆಗೆದುಹಾಕಿ. ಮಾನ್ಯ ಮುಖ್ಯಮಂತ್ರಿಗಳೇ, ತಾವು ಮಾತನಾಡಿ.

(ಮಾನ್ಯ ವೈಜನಾಥ್ ಪಾಟೀಲ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವೈಜನಾಥ್ ಪಾಟೀಲರೆ, ನಿನ್ನೆ ನೀವು ಮಾತನಾಡಿದ್ದಿರೀರಲ್ಲಾ, ಆಗಲೇ ಎಲ್ಲವನ್ನೂ ಮಾತನಾಡಬೇಕಾಗಿತ್ತು.

ಅಧ್ಯಕ್ಷರು : ನಾನು ಮಾಧ್ಯಮ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ವೆಲ್‌ನಲ್ಲಿ ನಿಂತುಕೊಂಡು ಮಾತನಾಡಿದ್ದು ವಾಟಾಳ್‌ನಾಗರಾಜ್‌ರವರಾಗಲಿ, ವೈಜನಾಥ್‌ಪಾಟೀಲರಾಗಲಿ, ಇನ್ನೊಬ್ಬರಾಗಿರಲಿ ಅದು ಕಡತಕ್ಕೆ ಹೋಗುವುದಿಲ್ಲ, ಆದ್ದರಿಂದ ಅದನ್ನು ದಯಮಾಡಿ ವರದಿ ಮಾಡಬಾರದು ಎಂದು ಪ್ರಾರ್ಥನೆ ಮಾಡುತ್ತೇನೆ. ಈಗ ಮುಖ್ಯಮಂತ್ರಿಗಳಿಂದ ಉತ್ತರ.

(ಮಾನ್ಯ ವೈಜನಾಥ್‌ಪಾಟೀಲ್‌ರವರು ಸಭಾತ್ಯಾಗ ಮಾಡಿದರು)

3. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರ, ವ್ಯವಸ್ಥೆಯಲ್ಲಿ ವಿಧಾನ ಸಭೆ ನಡೆಯತಕ್ಕ ಕಾಲದಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಇತರ ಎಲ್ಲಾ ಸದಸ್ಯರೂ ಕೂಡ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಮಾತನಾಡತಕ್ಕ ಕಾಲದಲ್ಲಿ ಸಮ್ಮಿಶ್ರ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಎಡವುತ್ತಿದ್ದಾರೆ ಮತ್ತು ಅಪವಿತ್ರ ಮೈತ್ರಿ ಮಾಡಿಕೊಂಡಿದ್ದಾರೆ ಎಂಬ ಶಬ್ದಗಳನ್ನು ಉಪಯೋಗ ಮಾಡಿದ್ದಾರೆ. ನಾನು ಮೊಟ್ಟಮೊದಲನೆಯದಾಗಿ, ರಾಜಕೀಯವಾಗಿ ಭಾಷಣ ಮಾಡಲು ನಿಂತಿಲ್ಲ ಮತ್ತು ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಂಥ ಟೀಕೆಗೆ ಉತ್ತರ ಕೊಡಲೂ ನಿಂತಿಲ್ಲ. ಕರ್ನಾಟಕ ಐದು ಕೋಟಿ ನಲವತ್ತೈದು ಲಕ್ಷ ಜನ ನಿರೀಕ್ಷೆ ಏನು ಮಾಡುತ್ತಿದ್ದಾರೆ, ರಾಜ್ಯಪಾಲರ ಭಾಷಣದಲ್ಲಿ ಯಾವ್ಯಾವ ಅಂಶಗಳನ್ನು ನಾವು ಸೇರಿಸಿದ್ದೇವೆ. ನಲವತ್ತು ಪುಟಗಳ ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ಜನರಿಗೆ ಏನು ಸಂದೇಶ ಕೊಡಬೇಕೆಂಬ ನಮ್ಮ ಉದ್ದೇಶವಿದೆ. ಏನೂ ಸಾಧನೆಯಾಗಿಲ್ಲ ಎಂಬ ರೀತಿಯಲ್ಲಿ ಸಾಕಷ್ಟು ಟೀಕೆ ಬರುತ್ತಿದೆ. ನಮ್ಮ ಸಾಧನೆಗಳ ಬಗ್ಗೆ ನಾನು ಹೇಳಲು ಬಯಸುತ್ತೇನೆ. ಮಾನ್ಯ ಯಡಿಯೂರಪ್ಪನವರು ಈ ಸರ್ಕಾರದಲ್ಲಿ ಕೆಲಸ ನಡೆಯುತ್ತಿಲ್ಲ. ಸರ್ಕಾರ ಇನ್ನೂ ಟೇಕ್ ಆಫ್ ಆಗಿಲ್ಲವೆಂದು ಪದೇ ಪದೇ ಹೇಳುತ್ತಾ ಬರುತ್ತಿದ್ದಾರೆ. ಈ ಸದನದಲ್ಲಿ ಈಗ ಕರ್ನಾಟಕ ಜನತೆಗೆ ಸಂಬಂಧಪಟ್ಟಂತೆ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಈಗಾಗಲೇ ಸದನದಲ್ಲಿ ಚರ್ಚೆಯಾಗಿದೆ. ಕುಡಿಯುವ ನೀರಿನ ಬಗ್ಗೆ ನಮ್ಮ ಸರ್ಕಾರ ಬೇಸಿಗೆ ಕಾಲದಲ್ಲಿ ನೀರಿನ ಕೊರತೆ, we have anticipated, ಸಂಭವನೇನಿದೆ, ಈಗಾಗಲೇ ನಾನು ಮತ್ತು ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಮಂತ್ರಿಗಳು drought hit areas ಏನಿದೆ ಅದಕ್ಕೆ 1100 ಕೋಟಿ ರೂಪಾಯಿಗಳು ಬೇಕಾಗಿದೆಯೆಂದು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೇವೆ. ಇವತ್ತು ರಾಜ್ಯ ಮತ್ತು ಕೇಂದ್ರದ ವಲಯದ ಅಡಿಯಲ್ಲಿ 146 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ, 94 ಕೋಟಿ ರೂ. ಖರ್ಚಾಗಿದೆ, ಇನ್ನೂ 51 ಕೋಟಿ ರೂ. ಜಿಲ್ಲಾಪಂಚಾಯಿತಿಗೆ ಕೊಟ್ಟಿದ್ದೇವೆ. ಅದನ್ನೂ ಕೂಡ ಖರ್ಚು ಮಾಡುತ್ತಿದ್ದಾರೆ. ಹೆಚ್ಚುವರಿಯಾಗಿ 24ನೇ ತಾರೀಖು 27 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿಗಳ ವಶದಲ್ಲಿ 20 ಕೋಟಿ ರೂ. ಇದೆ. ಮೊನ್ನೆ ಕೇಂದ್ರದ ಮಂತ್ರಿಗಳ ಜೊತೆ ನಾನೂ ಮಾನ್ಯ ಮಹದೇವಪ್ಪನವರು, ಮಾನ್ಯ ಉಪಮುಖ್ಯಮಂತ್ರಿಯವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿ ಅವರೂ ಕೂಡ 150 ಕೋಟಿ ರೂ. ಬೇಸಿಗೆ ಕಾಲದಲ್ಲಿ ಬರುವ